ಹಂಗಾವಿ ಅಧ್ಯಕ್ಷರಂ.—ಪ್ರಾಮುಖ್ಯವಾದ ವಿಷಯವನ್ನು ಮಾನ್ಯ ಸಭೆಯ ಗಮನಕ್ಕೆ ತರುವುದಕ್ಕೆ ನಾನು ಇಚ್ಛಿಪಡುತ್ತೇನೆ. ಶ್ರೀಮಾನ್ ಎಸ್. ಬಂಗಾರಪ್ಪ ಅವರನ್ನು ಕರ್ನಾಟಕ ಪ್ರದೇಶ್ ಕಾಂಗ್ರೆಸ್ (ಐ) ಶಾಸಕಾಂಗ ಪಕ್ಷದ ನಾಯಕರನ್ನಾಗಿ ಚುನಾಯಿಸಿದ್ದೇವೆಂದು ಕರ್ನಾಟಕ ಪ್ರದೇಶ ಕಾಂಗ್ರೆಸ್ (ಐ) ಪಕ್ಷದ ವತಿಯಿಂದ ಪತ್ರ ಬಂದಿದೆ. ಈ ಸಭೆಯಲ್ಲಿ ಕಾಂಗ್ರೆಸ್ (ಐ) ಪಕ್ಷದ ಸದಸ್ಯರು ೬೬ ಮಂದಿ ಸಂಖ್ಯಾ ಬಲವನ್ನು ಹೊಂದಿದ್ದಾರೆ. ಆದ್ದರಿಂದ ಸದನದಲ್ಲಿ ಕಾಂಗ್ರೆಸ್ (ಐ) ಪಕ್ಷ ವಿರೋಧಪಕ್ಷವೆಂದೂ, ಶ್ರೀ ಎಸ್. ಬಂಗಾರಪ್ಪ ಅವರನ್ನು ವಿರೋಧಪಕ್ಷದ ನಾಯಕರೆಂದೂ ಮನ್ನಣೆ ನೀಡಿದ್ದೇನೆ.

ಅಧ್ಯಕ್ಷರವರ ಚುನಾವಣೆ

ಅಧ್ಯಕ್ಷ ಸ್ಥಾನಕ್ಕೆ ಮಾನ್ಯ ಶ್ರೀ ಬಿ. ಜಿ. ಬಣಕಾರ್ ಅವರ ಹೆಸರನ್ನು ಸೂಚಿಸಿ ಎರಡು ಪ್ರಸ್ತಾಪಗಳು ಬಂದಿವೆ. ಕಾರ್ಯಕ್ರಮದ ಪಟ್ಟಿಯಲ್ಲಿರುವ ಕ್ರಮದಲ್ಲಿಯೇ ಅವರವರ ಹೆಸರಿನಲ್ಲಿರತಕ್ಕ ಪ್ರಸ್ತಾವಗಳನ್ನು ಸೂಚಿಸಲು ಸೂಚಕರ ಹೆಸರುಗಳನ್ನು ಕರೆಯುತ್ತೇನೆ. ಎರಡೂ ಪ್ರಸ್ತಾವಗಳನ್ನೂ ಸೂಚಿಸಿ ಅವುಗಳನ್ನು ಅನುಮೋದಿಸಿದ ನಂತರ, ಯಾವ ಕ್ರಮದಲ್ಲಿ ಸೂಚಿಸಲಾಗಿದೆಯೋ ಅದೇ ಕ್ರಮದಲ್ಲಿ ಪ್ರಸ್ತಾವಗಳನ್ನು ಸಭೆಯ ಮತಕ್ಕೆ ಹಾಕುತ್ತೇನೆ. ಮೊದಲನೆಯ ಪ್ರಸ್ತಾವವನ್ನು ಸಭೆಯು ಅಂಗೀಕರಿಸಿದಲ್ಲಿ ಎರಡನೆಯ ಪ್ರಸ್ತಾವವನ್ನು ಮತಕ್ಕೆ ಹಾಕಲಾಗುವುದಿಲ್ಲ.

ಈಗ ಶ್ರೀ ರಾಮಕೃಷ್ಣ ಹೆಗಡೆಯವರ ಹೆಸರಿನಲ್ಲಿರುವ ಪ್ರಸ್ತಾವವನ್ನು ಸೂಚಿಸುವಂತೆ ಕೋರಿ ಪ್ರಸ್ತಾವವನ್ನು ಅನುಮೋದಿಸುವಂತೆ ಶ್ರೀ ಬಿ. ರಾಚಯ್ಯ ಅವರನ್ನು ಕೋರುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೆ, ''ಮಾನ್ಯ ಬಿ. ಜಿ. ಬಣಕಾರ್ ಅವರನ್ನು ವಿಧಾನ ಸಭೆಯ ಅಧ್ಯಕ್ಷರನ್ನಾಗಿ ಚುನಾಯಿಸಬೇಕೆಂದು ನಾನು ಸೂಚಿಸುತ್ತೇನೆ.''

ಶ್ರೀ ಬಿ. ರಾಚಯ್ಯ.—ನಾನು ಈ ಪ್ರಸ್ತಾವವನ್ನು ಅನುಮೋದಿಸುತ್ತೇನೆ.

(ಪ್ರಸ್ತಾವನೆಯನ್ನು ಮಂಡಿಸಲಾಯಿತು)

ಈಗ ಶ್ರೀ ಹೆಚ್. ಡಿ. ದೇವೇಗೌಡ ಅವರ ಹೆಸರಿನಲ್ಲಿರುವ ಪ್ರಸ್ತಾವವನ್ನು ಸೂಚಿಸುವಂತೆ ಅವರನ್ನು ಕೋರಿ, ಪ್ರಸ್ತಾವವನ್ನು ಅನುಮೋದಿಸುವಂತೆ ಶ್ರೀ ಜೆ. ಎಚ್. ಪಟೇಲರವರನ್ನು ಕೋರುತ್ತೇನೆ.

ಶ್ರೀ ಹೆಚ್. ಡಿ. ದೇವೇಗೌಡ.—ಮಾನ್ಯ ಅಧ್ಯಕ್ಷರೇ, ''ಮಾನ್ಯ ಬಿ. ಜಿ. ಬಣಕಾರ್ ಅವರನ್ನು ವಿಧಾನಸಭೆಯ ಅಧ್ಯಕ್ಷರನ್ನಾಗಿ ಚುನಾಯಿಸಬೇಕೆಂದು ನಾನು ಸೂಚಿಸುತ್ತೇನೆ.''

ಶ್ರೀ ಜೆ. ಎಚ್. ಪಟೇಲ್.—ನಾನು ಈ ಪ್ರಸ್ತಾವವನ್ನು ಅನುಮೋದಿಸುತ್ತೇನೆ.

(ಪ್ರಸ್ತಾವನೆಯನ್ನು ಮಂಡಿಸಲಾಯಿತು)

ಅಧ್ಯಕ್ಷರು.—ಈಗ ಶ್ರೀ ರಾಮಕೃಷ್ಣ ಹೆಗಡೆಯವರು ಮಂಡಿಸಿರತಕ್ಕ ಮೊದಲನೆಯ ಪ್ರಸ್ತಾವನ್ನು ಸಭೆಯ ಮತಕ್ಕೆ ಹಾಕುತ್ತೇನೆ,

ಪ್ರಸ್ತಾವನೆ ಹೀಗಿದೆ.—''ಶ್ರೀ ಬಿ. ಜಿ. ಬಣಕಾರ್ ಅವರನ್ನು ವಿಧಾನಸಭೆಯ ಅಧ್ಯಕ್ಷರನ್ನಾಗಿ ಚುನಾಯಿಸುವುದು.''

(ಪ್ರಸ್ತಾವನೆಯು ಸರ್ವಾನುಮತದಿಂದ ಅಂಗೀಕರಿಸಲ್ಪಟ್ಟಿತು)

ಅಧ್ಯಕ್ಷರು.—ಈ ಪ್ರಸ್ತಾವವನ್ನು ಸಭೆಯು ಅಂಗೀಕರಿಸಿರುವುದರಿಂದ ಎರಡನೆಯ ಪ್ರಸ್ತಾವವನ್ನು ಸಭೆಯ ಮತಕ್ಕೆ ಹಾಕಬೇಕಾಗಿಲ್ಲ.

ಶ್ರೀ ಬಿ. ಜಿ. ಬಣಕಾರ್ ಅವರನ್ನು ನಾನು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ.

ಶ್ರೀ ಬಿ. ಜಿ. ಬಣಕಾರ್ ಅವರನ್ನು ಸೂಚಕರಾದ ಶ್ರೀ ರಾಮಕೃಷ್ಣ ಹೆಗಡೆಯವರು ಹಾಗೂ ಅನುಮೋದಕರಾದ ಶ್ರೀ ರಾಚಯ್ಯ ಅವರು ಅಧ್ಯಕ್ಷಪೀಠಕ್ಕೆ ಕರೆತರಬೇಕೆಂದು ಕೋರುತ್ತೇನೆ.

(ಮುಖ್ಯಮಂತ್ರಿಗಳಾದ ಶ್ರೀ ರಾಮಕೃಷ್ಣ ಹೆಗಡೆಯವರು ಮತ್ತು ಗೃಹಸಚಿವರಾದ ಶ್ರೀ ರಾಚಯ್ಯನವರು ಅಧ್ಯಕ್ಷರಾಗಿ ಆಯ್ಕೆಯಾದ ಶ್ರೀ ಬಿ. ಜಿ. ಬಣಕಾರ್ ಅವರನ್ನು ಅಧ್ಯಕ್ಷ ಪೀಠಕ್ಕೆ ಕರೆದುಕೊಂಡು ಬಂದರು)

(ಮಾನ್ಯ ಅಧ್ಯಕ್ಷರಿಗೆ ಹಸ್ತಲಾಘವವನ್ನು ಕೊಟ್ಟನಂತರ ತಾತ್ಕಾಲಿಕ ಅಧ್ಯಕ್ಷರು ಅವರಿಗೆ ಪೀಠವನ್ನು ಬಿಟ್ಟು ಕೊಟ್ಟರು)

ಮಾನ್ಯ ಅಧ್ಯಕ್ಷರು.—(ಶ್ರೀ ಬಿ ಜಿ. ಬಣಕಾರ್‌ರವರು ಪೀಠವನ್ನು ಅಲಂಕರಿಸಿದರು.)

ಅಭಿನಂದನಾ ಭಾಷಣಗಳು

ಶ್ರೀ ರಾಮಕೃಷ್ಣ ಹೆಗಡೆ (ಮಾನ್ಯ ಮುಖ್ಯ ಮಂತ್ರಿಗಳು)— ಮಾನ್ಯ ಅಧ್ಯಕ್ಷರೆ, ಇಂದು ಕರ್ನಾಟಕ ವಿಧಾನ ಸಭೆಯ ಹೊಸ ಅಧ್ಯಕ್ಷರಾಗಿ ತಮ್ಮನ್ನು ಅವಿರೋಧವಾಗಿ ನಾವೆಲ್ಲರೂ ಸೇರಿ ಆರಿಸಿದ್ದೇವೆ. ಸಂದರ್ಭದಲ್ಲಿ ನಮ್ಮ ಪಕ್ಷದ ವತಿಯಿಂದ ಮತ್ತು ವೈಯಕ್ತಿಕವಾಗಿ ನನ್ನ ವತಿಯಿಂದ ಹೃತ್ಪೂರ್ವಕವಾದ ಅಭಿನಂದನೆಗಳನ್ನು ಮತ್ತು ಶುಭಾಶಯಗಳನ್ನು ತಮಗೆ ಕೊಡಲಿಕ್ಕೆ ಬಯಸುತ್ತೇನೆ. ಅವಿರೋಧವಾಗಿ ತಮ್ಮ ಆಯ್ಕೆ ಆಗಿರತಕ್ಕಂತಥದ್ದು ಎರಡು ಸಂಗತಿಗಳನ್ನು ಸೂಚನೆ ಮಾಡುತ್ತದೆ. ಮೊದಲನೆಯದಾಗಿ, ತಮ್ಮ ಬಗ್ಗೆ ಈ ಸದನದ ಸದಸ್ಯರೆಲ್ಲರಲ್ಲಿರತಕ್ಕ ಗೌರವ ತಮ್ಮ ತಜನಪ್ರಿಯತೆ. ಎರಡನೆಯದು, ವಿರೋಧ ಪಕ್ಷ ಒಂದು ಒಳ್ಳೆಯ ಂಪ್ರದಾಯವನ್ನು ಇವ್ವೊತ್ತು ಹಾಕಿಕೊಟ್ಟಿದೆ ಎಂದು ನಾನು ಭಾವಿಸಂತ್ತೇನೆ. ಯಾವ ವಿಚಾರದಲ್ಲಿ ಭಿನ್ನಾಭಿಪ್ರಾಯ ಇಲ್ಲವೋ ಅಂತಹ ವಿಚಾರದಲ್ಲಿ ರಚನಾತ್ಮಕವಾದ ಒಂದು ಬೆಂಬಲವನ್ನು ಅವರು ಕೊಟ್ಟಿದ್ದಕ್ಕಾಗಿ.ಮಾನ್ಯ ಅಧ್ಯಕ್ಷರೇ, ತಮ್ಮ ವಿಚಾರದಲ್ಲಿ ನಾನಂ ಇಲ್ಲಿ ಬಹಳದೀರ್ಘವಾಗಿ ಭಾಷಣ ಮಾಡಬೇಕಾದುದು ಇಲ್ಲ. ತಾವು ಈ ಸಭೆಗೆಹೊರಗಿನವರಲ್ಲ. ಅನೇಕ ವರ್ಷಗಳ ಅನಂಭವ ತವಂಗಿದೆ. ಈ ಮಾನ್ಯ ಸಭೆಯ ಸದಸ್ಯರಾಗಿ ಮತ್ತು ಸರ್ಕಾರದಲ್ಲಿ ಮಂತ್ರಿಗಳಾಗಿ ಆ ಒಂದು ಅನುಭವವನ್ನು ತಾವು ಪಡೆದಿದ್ದೀರಿ. ರಚನಾತ್ಮಕವಾದ ಕಾರ್ಯಗಳುಅದು ತಮ್ಮ ಕ್ಷೇತ್ರದಲ್ಲೇ ಆಗಿರಲಿ, ಜಿಲ್ಲೆಯಲ್ಲೇ ಆಗಿರಲಿ ಮತ್ತು, ಮಂತ್ರಿಗಳಾಗಿ ಸೇವೆ ಮಾಡಿದ್ದಾಗ ಆಗಿರಲಿ, ಇಡೀ ರಾಜ್ಯಕ್ಕೇ ಸಂಬಂಧಪಟ್ಟದ್ದಾಗಿರಲಿ ನಮಗೆಲ್ಲರಿಗೂ ಅದು ಗೊತ್ತುಂಟು ನಮ್ಮೆಲ್ಲರಿಗೂ ತಮ್ಮ ಬಗ್ಗೆ ಸಂಪೂರ್ಣವಾದ ನಂಬಿಕೆ ಇದೆ. ನಿಮ್ಮ ಅನುಭವ, ನಿಮ್ಮ ಬುದ್ಧಿಶಕ್ತಿ, ನಿಮ್ಮ ವಾಕ್‌ಚಾತುರ್ಯ ಇವೆಲ್ಲಗಳ ಬಲದಿಂದ ಈ ಸಭೆಯ ಕಾರ್ಯಕಲಾಪಗಳನ್ನು ಅತ್ಯಂತ ಸಮರ್ಥ ರೀತಿಯಿಂದ, ಸಮರ್ಪಕವಾಗಿ, ನಿಷ್ಪಕ್ಷಪಾತವಾಗಿ ಹಾಗೂ ಸತ್ಯ ನಿಷ್ಠೆಯಿಂದ ನಿರ್ವಹಿಸುತ್ತೀರಿ ಎಂದು ಹೇಳುವ ವಿಚಾರದಲ್ಲಿ ನಮ್ಮೆಲ್ಲರ ಸಂಪೂರ್ಣವಾದ ನಂಬಿಕೆ ತಮ್ಮ ಬಗ್ಗೆ ಇದೆ. ಮಾನ್ಯ ಅಧ್ಯಕ್ಷರೆ, ಈ ಸಭೆಯ ಇತಿಹಾಸ ವೈಶಿಷ್ಟ್ಯಪೂರ್ಣವಾದ ಇತಿಹಾಸ. ನಮ್ಮ ದೇಶದಲ್ಲೇ ಅತ್ಯಂತ ದೀರ್ಘ ಅವಧಿಯ ಅಥವಾ ಪುರಾತನ ಎಂದು ಹೇಳಿದರೆತಪ್ಪಾಗಲಿಲಿಕ್ಕಿಲ್ಲ. ಅಂತಹ ಒಂದು ಸಭೆಯಲ್ಲಿ ಇದು ಒಂದು. ಈ ಸಭೆಯ ಕಾರ್ಯಕಲಾಪಗಳಲ್ಲಿ ಯಾವಾಗಲೂ, ಕೆಲವೊಂದು ದುರದೃಷ್ಟಕರವಾದ ಪ್ರಸಂಗಗಳದ್ದು ಬಿಟ್ಟರೆ ಗೌರವ ಮಂತ್ತು ಸತ್‌ಸಂಪ್ರದಾಯ ಇವುಗಳನ್ನು ಅನುಸರಿಸಿಕೊಂಡ ಬಂದಂತಹ ಒಂದು ಪರಂಪರೆ ಇದೆ. ಆ ಒಂದು ಪರಂಪರೆಯನ್ನು ನಾವೆಲ್ಲರೂ ಕಾಯ್ದುಕೊಂಡು ಹೋಗೋಣ ಮತ್ತು ಆ ಕೆಲಸದಲ್ಲಿ ತಮ್ಮ ಮಾರ್ಗದರ್ಶನ ಸಹಕಾರಿಯಾಗುತ್ತದೆಂದು ನಾವು ತಿಳಿದಿದ್ದೇನೆ. ಈ ಸಲದಸಭೆಯ ಸ್ವರೂಪ ಮೊದಲಿಗಿಂತಲೂ ಭಿನ್ನವಾಗಿದೆ ಬಹುಶಃ ಈ ಸಭೆಯ ಇತಿಹಾಸದಲ್ಲಿ ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಯುವಕರು ಸದಸ್ಯರಾಗಿ ಆರಿಸಿ ಬಂದಂತಹ ಇತಿಹಾಸ ಮತ್ತೊಂದು ಇರಲಿಕ್ಕಿಲ್ಲ, ಅಷ್ಟೇ ಅಲ್ಲ ಈ ಸಭೆಯಲ್ಲಿ ಇಂದು ಇರುವಂತಹ ಸದಸ್ಯರಲ್ಲಿ ಸಾಧಾರಣ ಹೆಚ್ಚು ಕಡಿಮೆ ಅರ್ಧ ಭಾಗದ ಸದಸ್ಯರು ಹೊಸದಾಗಿ ಹಾಗೂ ಪ್ರಪ್ರಥಮವಾಗಿ ಈ ಸಭೆಯ ಸದಸ್ಯರಾಗಿದ್ದಾರೆ. ಈ ಮೊದಲು ಸದಸ್ಯರಾಗಿ ಕೆಲಸ ಮಾಡಿದಂತಹವರು, ಅನುಭವ ಪಡೆದಂತಹವರು ಮತ್ತು ಹೊಸದಾಗಿ ಉತ್ಸಾಹ ಮತ್ತು ಆದರ್ಶ ಇವುಗಳನ್ನು ಒಳಗೊಂಡಿರತಕ್ಕಂತಹ ಹೊಸ ಸದಸ್ಯರು, ಇವೆರಡರ ಸಂಗಮ ಈ ಸಭೆಯಲ್ಲಿ ಇಂದು ನಾವು ನೋಡುತ್ತಿದ್ದೇವೆ. ಹೊಸದಾಗಿ ಆರಿಸಿ ಬಂದಂತಹ ಎಲ್ಲಾ ಸದಸ್ಯರಿಗೂ ನನ್ನ ಹೃತ್ಪೂರ್ವಕವಾದ ಅಭಿನಂದನೆಗಳು. ಈ ಸಂದರ್ಭದಲ್ಲಿ ತಾವು ತಮ್ಮ ಚಾಕಚಕ್ಯತೆ ಮತ್ತು ಅನುಭವಗಳ ಆಧಾರದ ಮೇಲೆ ಅತ್ಯಂತ